**III ADDL. DISTRICT AND SESSIONS COURT, BELAGAVI**
**AT: BELAGAVI**

SC: 155/2020

PW : 8 CW: 36

| | |
|---|---|
| Witness Name | : Dr.Annapurna Angadi |
| Husbands' Name | : Sri.Mohan |
| Age | : 39 Years |
| Occupation | : Gynecologist, CHC Kittur. |
| Resident | : Kittur |
| Date | : 29-01-2026 |

Witness is examined on oath on this 29-01-2026.

**Chief Examination : Special Public Prosecutor**

From 2018 to till this day I am working as a Gynecologist in Community Health Center At Kittur.

2. On 03-03-2020 at about 10:45 Hrs one Sri.Vittal Y.Dodamani resident of Basarkod Village has brought a injured person namely Basavaraj Rudrappa Dodamani for treatment with a history of assault on the injured at 6:00 Hrs on 03-03-2020 at Basarakod Village.

I have examined the injured and noticed that:-

1. PR - Feeble
2. BP - Systolic 80 mmhg
3. RR - 12CPM

4. Pupils- constricted not responding to light.
5. CVS - S1 S2 heard muffled.
6. RS - Decreased breath sound
7. CNS - Not oriented to time, place and person, not responding to stimuli.

I have given treatment to the patient in following manner:-

1. O2 Inhalation .
2. IV fluid started.
3. Injection Atropine 1 amp IU start.
4. Injection Adrenaline 1 amp IU start.
5. Shifted to higher center [ District Hospital Dharwad] through 108 Ambulance as patient was in need of ventilators. At the time of adminisaring the treatment to the injured, I have noticed two injuries :-
    1. Contusion over the right eyelid with black eye.
    2. Cut lacerated wound over right parietal bone measuring 6cm x 1 cm x deep to the brain.

I have produced the original MLC register of CHC of Kittur dated 12-11-2019 to 05-09-2020. Wherein at page No.152 dated 03-03-2020 I have mentioned the details of patient Basavaraj Rudrappa Dodamani, the injuries sustained by him and the treatment given to him in my handwriting. The MLC is register is marked as Ex.P54. The relevant entry at page No.152 dated 03-03-2020 is marked as Ex.P54[a] and the signature of the witness is

marked as Ex.P54[b].

I have given separate report in white sheet to the complainant police. The report is marked as Ex.P55 and the signatue of the witness is marked as Ex.P55[a].

**<u>ಪಾಟೀ ಸವಾಲುಃ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ ಆರೋಪಿತರ ಪರವಾಗಿ</u>**

2020 ರಲ್ಲಿ ನಮ್ಮ ಆಸ್ಪತ್ರೆಯಲ್ಲಿ ಜನರಲ್ ಮೆಡಿಸಿನ ಅವರು ಇದ್ದರು ಅವರು ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ದಿನ ಅವರು ಕರ್ತವ್ಯದಲ್ಲಿ ಇರಲಿಲ್ಲ. ಆ ದಿನ ಅಂದರೆ ದಿನಾಂಕಃ 03-03-2020 ರಂದು ನಾನು ಮಾತ್ರ ಕರ್ತವ್ಯದಲ್ಲಿದ್ದೇನು. ವೈದ್ಯಾಧಿಕಾರಿಗಳು ನನಗಿಂತ ವೃತ್ತಿಯಲ್ಲಿ ಹಿರಿಯರು ಎನ್ನುವುದು ಸರಿ. ಗಾಯಾಳುವನ್ನು ನೋಡಿದ ಕೂಡಲೇ ಆತನ ಸ್ಥಿತಿ ತೀರ ಗಂಭೀರವಾಗಿದೆ ಎಂದು ನನಗೆ ಅನಿಸಿತ್ತು ಎನ್ನುವುದು ಸರಿ. ನಾನು ನನ್ನ ಹಿರಿಯ ವೈದ್ಯಾಧಿಕಾರಿಯವರನ್ನು ಫೋನ ಮೂಲಕ ಸಂಪರ್ಕಿಸಿದ್ದೇನೆ, ಅವರ ಮಾರ್ಗದರ್ಶನದಲ್ಲಿ ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿದ್ದೇನೆ.

2. ನಾನು ನಿಪಿ-54 [ಎ] ಮತ್ತು ನಿಪಿ-55 ರಲ್ಲಿ ವೈದ್ಯಾಧಿಕಾರಿಯ ಮಾರ್ಗದರ್ಶನದಲ್ಲಿ ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿದ್ದೇನೆ ಎಂದು ಬರೆದಿರುವುದಿಲ್ಲ. ಆದರೆ ನಾನು ವೈದ್ಯಳಾಗಿ ನನ್ನ ಅನುಭವದಂತೆ ನಾನು ಚಿಕಿತ್ಸೆ ನೀಡಿದ್ದೇನೆ ಎಂದು ಹೇಳಿದ್ದಾರೆ.

3. ನಿಪಿ-54 [ಎ] ಪ್ರತಿಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ನೀಡಿರುವಂತಹ ಚಿಕಿತ್ಸೆಯು ಹೃದಯ ಬಡಿತವನ್ನು ಹೆಚ್ಚು ಮಾಡಲು ಮತ್ತು ರಕ್ತದೊತ್ತಡವನ್ನು ಹೆಚ್ಚು ಮಾಡಲು, ಹೃದಯ ಸ್ಥಗಿತಗೊಳ್ಳದಂತೆ ನೋಡಿಕೊಳ್ಳುವ ಸಲುವಾಗಿ ನೀಡಿದ್ದೇನೆ ಎನ್ನುವುದು ಸರಿ. ನಿಪಿ-54 [ಎ] ನಲ್ಲಿ ಸಮಯವನ್ನು 8:00 ಗಂಟೆ ಎಂದು ಬರೆದು 6:00

ಗಂಟೆ ಎಂದು ತಿದ್ದಿ ಬರೆಯಲಾಗಿದೆ ಎನ್ನುವುದಕ್ಕೆ ಸಾಕ್ಷಿ ನಾನು ಗಾಯಾಳುವನ್ನು ಕರೆದುಕೊಂಡು ಬಂದಿದ್ದ ವಿಠ್ಠಲ ಅವರೊಂದಿಗೆ ಮಾತನಾಡುತ್ತಿದ್ದಾಗ ಅವರೊಂದಿಗೆ ಬಂದಿದ್ದ ಇಬ್ಬರು ವ್ಯಕ್ತಿಗಳು 8:00 ಗಂಟೆ ಎಂದು ಹೇಳುತ್ತಿದ್ದರು ಆ ಕಾರಣ ಆ ರೀತಿ ಬರೆದಿದ್ದು ನಂತರ ಸಮಯವನ್ನು ಖಚಿತಪಡಿಸಿಕೊಂಡು ಸಮಯವನ್ನು 6:00 ಗಂಟೆ ಎಂದು ತಿದ್ದಿ ಬರೆಯಾಲಾಗಿದೆ ಎಂದು ಹೇಳಿದ್ದಾರೆ.

4. ತಲೆಯಲ್ಲಿ ಆಗಿದ್ದ ಗಾಯದಲ್ಲಿ ರಕ್ತ ಸೋರುವುದು ನಿಂತು ಹೆಪ್ಪುಗಟ್ಟಿತ್ತು. ಮುಖ, ತಲೆ ಮತ್ತು ಗಾಯದ ಸುತ್ತುಮುತ್ತಲೂ ಬಣ್ಣ ಬಣ್ಣದ ವಸ್ತುಗಳು ಅಂಟಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ.

5. ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯಿಂದ ಎಮ್.ಎಲ್.ಸಿ ಪ್ರಕರಣಗಳಲ್ಲಿ ಮರಣೋತ್ತರ ಪರೀಕ್ಷಾ ವರದಿಯನ್ನು, ಗಾಯದ ಪ್ರಮಾಣ ಪತ್ರ, ಪರೀಕ್ಷಾ ವರದಿಯನ್ನು ನೀಡಲು ಪ್ರತ್ಯೇಕವಾದ ನಿಗದಿತ ನಮೂನೆಗಳನ್ನು ಒದಗಿಸಿದ್ದಾರೆ ಎನ್ನುವುದು ಸರಿ.

6. ಎಮ್.ಎಲ್.ಸಿ ಪ್ರಕರಣಗಳಲ್ಲಿ ಮಾಹಿತಿಯನ್ನು ಕೂಡಲೇ ಸಂಬಂಧಪಟ್ಟ ಪೋಲಿಸರಿಗೆ ನೀಡಬೇಕು ಎನ್ನುವುದು ಸರಿ.

7. ಸರ್ಕಾರದ ಆರೋಗ್ಯ ಇಲಾಖೆಯವರು ನಮಗೆ ಪ್ರತ್ಯೇಕವಾದ ನಿಗದಿತ ನಮೂನೆಗಳನ್ನು ಒದಗಿಸಿದ್ದರೂ ಸಹ ಗಾಯಾಳು ಬಸವರಾಜ ರುದ್ರಪ್ಪ ದೊಡಮನಿ ಅವರ ಸಂಬಂಧಿಕರ ಹಾಗೂ ಪೋಲಿಸರ ಮಾತು ಕೇಳಿ ನಾನು ಬಿಳಿ ಕಾಗದದಲ್ಲಿ ನಿಪಿ–55 ರಂತೆ ವರದಿ ಬರೆದುಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

8. ಕಿತ್ತೂರು ಪೋಲಿಸರು ನನ್ನಿಂದ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿ. ನಿಪಿ–54 ಆಸ್ಪತ್ರೆಯ ದಿನನಿತ್ಯದ ವ್ಯವಹಾರಗಳಿಗೆ ಅವಶ್ಯಕ ಇರುವುದರಿಂದ ನಿಪಿ–54 ರ ಮುಖಪುಟ ಹಾಗೂ ಪುಟಸಂಖ್ಯೆ 152 ರಲ್ಲಿರುವ ಈ ಪ್ರಕರಣಕ್ಕೆ ಸಂಬಂಧಪಟ್ಟ ವಿವರಗಳ ಧೃಡೀಕೃತ ಯಥಾ ಪ್ರತಿಯನ್ನು ಕಡತದಲ್ಲಿ ಇರಿಸಿ ಅದರ ನಕಲುಗಳನ್ನು ಸರ್ಕಾರಿ ಅಭಿಯೋಜಕರವರಿಗೆ ಮತ್ತು ಆರೋಪಿತರ ಪರ ವಕೀಲರಿಗೆ ನೀಡಿದ್ದು, ಮೂಲ ರಜಿಸ್ಟರನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.